ಕವಿ- ಕವಯಿತ್ರಿಯರು ಸೇರಿದ್ದರು. ಯಾರ ಕವಿತೆಯನ್ನೂ ಯಾರೂ ತಪ್ಪಿಸಿಕೊಳ್ಳುವಂತಿಲ್ಲ. ವೇದಿಕೆ ಮೇಲೆ ನಿಂತರೆ ಅಗಾಧತೆಯ ಅನುಭವ ಕೊಡುವಂತಹ ವೇದಿಕೆಯದು. ಪ್ರತಿಯೊಬ್ಬರೂ ತಮ್ಮ ಸರದಿ ಬಂದಾಗ ತಮಗೇ ವಿಶಿಷ್ಟವಾದ ಶೈಲಿಗಳಲ್ಲಿ ಸಭೆಯಿಂದ ಎದ್ದು ಹೋಗಿ ವೇದಿಕೆ ಏರಿ ನಡುವೆ ಇರುವ ಪೋಡಿಯಮ್ ಹಿಂದೆ ನಿಂತು ಸಭೆಯನ್ನೊಮ್ಮೆ ದಿಟ್ಟಿಸಿ ಒಂದು ಕ್ಷಣದ ಮೌನದ ನಂತರ ಕವಿತೆ ಓದಿ ನಿಧಾನವಾಗಿ ಕೆಳಗಿಳಿದು ಬಂದು ತಮ್ಮ ಆಸನದಲ್ಲಿ ಕುಳಿತುಕೊಳ್ಳುತ್ತಿದ್ದರು. ಆಗ ನಿರೂಪಕ ಮುಂದಿನ ಕವಿಯ ಪ್ರಸಿದ್ಧ ವಿಶೇಷ ಸಾಲನ್ನು ಕೋಟ್ ಮಾಡಿ ನಂತರ ಕವಿಯ ಅಥವಾ ಕವಯಿತ್ರಿಯ ಹೆಸರು ಕರೆಯುತ್ತಿದ್ದ. ವೇದಿಕೆ ಮೇಲೆ ಯಾರೂ ಕುಳಿತುಕೊಂಡಿರಲಿಲ್ಲ. ವೇದಿಕೆ ಮೇಲೆ ಕುಳಿತರೆ ಕವಿ-ಕವಯಿತ್ರಿಯರಿಗೆ ಅವರವರ ಬಗ್ಗೆಯೇ ವಿಪರೀತ ಗಮನ ಬಂದು ಬಿಡುವುದರಿಂದ ಒಬ್ಬರ ಕವಿತೆಯನ್ನು ಇನ್ನೊಬ್ಬರು ನಿರುಮ್ಮಳ ಮನದಿಂದ ಗ್ರಹಿಸಲು ಸಾಧ್ಯವಾಗುವುದಿಲ್ಲ. ಈ ರೀತಿ ಮಾಡಿದರೆ ಎಲ್ಲಾ ರೀತಿಯಲ್ಲೂ ಪರಿಣಾಮಕಾರಿಯಾಗಿರುತ್ತದೆ ಎಂದಿದ್ದ ಲೋಹಿತೇಶ್ವರ. ಅವನು ಏನಾದರೂ ಹೇಳಿದರೆ ಅದಕ್ಕೊಂದು ಸರಿಯಾದ ಹಿನ್ನೆಲೆಯೇ ಇರುತ್ತಿತ್ತು. ಅವನ ಕಥೆ- ಕವಿತೆಗಳು ಮಾತ್ರ ಸುಡುತ್ತಿದ್ದುದಲ್ಲ. ಅವನು ನಡೆಸುತ್ತಿದ್ದ 'ಉಗಮ' ಪತ್ರಿಕೆಯೂ ಹಾಗೇ. ತನ್ನ ಪತ್ರಿಕೆಯಲ್ಲಿ ರಾಜಕೀಯ, ಸಾಮಾಜಿಕ, ಸಿನಿರಂಗ, ಕಾರ್ಪೊರೇಟ್ ಜಗತ್ತಿನ ಆಡ್ಯರನ್ನೂ ಬಿಡದೆ ಜಾಲಾಡಿ ದಕ್ಕಿಸಿ ಕೊಳ್ಳುತ್ತಿದ್ದುದರಿಂದ ಅವನೊಂಥರಾ ಸ್ಟಾರ್ ಲೇಖಕ. ಜೊತೆಗೆ ಹೊಸ ಪ್ರತಿಭೆಗಳನ್ನು ಗುರುತಿಸಿ ಬರೆಸುವ ಕೆಲಸವನ್ನೂ ಅದೊಂದು ಜವಾಬ್ದಾರಿ ಎಂಬಂತೆ ಮಾಡುತ್ತಿದ್ದ. ಅವನ ವೈಚಾರಿಕ ನಿಷ್ಠುರತೆ, ವಿಷಯ ಸ್ಪಷ್ಟತೆ, ಸುಡು ಪ್ರತಿಭೆಯ ಪ್ರಖರತೆಯ ಮುಂದೆ ಗಂಡು, ಹೆಣ್ಣೆಂಬ ಭೇದವಿಲ್ಲದೆ ಎಲ್ಲರೂ ಫಿದಾ ಆಗುತ್ತಿದ್ದರು. ಆತ ಮಾತಾಡುತ್ತಿದ್ದರೆ ತಲೆದೂಗುತ್ತಿದ್ದರು. ಆತನ ಕಥೆಗಳೆಂದರೆ ಹೊಕ್ಕುಳಿಗೆ ಮುಳ್ಳು ಚುಚ್ಚಿದಂತಾ ಸಂವೇದನೆ. ಆತನ ಸ್ತ್ರೀ ಪರ ನಿಲುವು, ಸ್ತ್ರೀವಾದಿ ಚಿಂತನೆಗಳಿಗೆ ಹೆಣ್ಣು ಹುಲಿಗಳಂಥ ಕವಯಿತ್ರಿಯರ ದೇಹ ಸಮತೋಲ ತಪ್ಪಿ ತೊನೆದು ಅವನೆದೆಗೇ ಬೀಳುವಾಗ, ಅವನ ಬೆರಳ ನಡುವಿರುವ ಸಿಗರೇಟ್ ಕಸಿದು ಒಂದು 'ಪಫ್' ಎಳೆದಾಗಲಂತೂ ಸಹವರ್ತಿ ಗಂಡು ಲೇಖಕರು ಒಳಗೊಳಗೇ ಉರಿದು ಕೊಳ್ಳುತ್ತಿದ್ದರು. ಲೋಹಿತೇಶ್ವರನಿಗೆ ಎಲ್ಲವೂ ಅರ್ಥವಾಗುತ್ತಿತ್ತು. ಅವನದನ್ನು ಆಸ್ವಾದಿಸುತ್ತಿದ್ದ. ತನ್ನ ಸಮಕಾಲೀನ ಹಳೇ ಹೆಣ್ಣು ಹುಲಿಗಳಲ್ಲಿ ಅವನ ಕಣ್ಣು ಕಿಸುರಿದ್ದಿದ್ದು ಸದಾ ರಮಣಿಯ ಮೇಲೆ. ರಮಣಿ ತನ್ನಿಂದ ಒಂದು ಅಂತರ ಕಾಯ್ದುಕೊಳ್ಳುತ್ತಿದ್ದಾಳೆ. ತನ್ನ ಒಳಗಿದನೇನನ್ನೋ ಅವಳು ತಿರಸ್ಕಾರದಿಂದ ಕಾಣುತ್ತಿದ್ದಾಳೆ ಎಂದನಿಸುತ್ತಿತ್ತು ಲೋಹಿತೇಶ್ವರನಿಗೆ. ಸಾಮಾನ್ಯ ಧ್ವನಿಯ ಆ್ಯವರೇಜ್ ಬರಹಗಾರ್ತಿಯಾದರೂ ಧಿಮಾಕು ದೊಡ್ಡ ಮುಂಡಾಸಿನವನಷ್ಟು. ಎಂತೆಂಥಾ ಹೆಣ್ಣು ಹುಲಿಗಳನ್ನ ಶರಣಾಗಿಸುವ ವ್ಯಕ್ತಿತ್ವ ತನ್ನದು. ಅಂಥಾದ್ದರಲ್ಲಿ ಈ ಇವಳು... ಹೀಗಂದುಕೊಳ್ಳುವಾಗಲೇ ಇಷ್ಟಕ್ಕೂ ಇವಳು ಯಾವುದರಲ್ಲಾದರೂ ಹುಲಿಯಂಥವಳಾ... ಅವನೇ ಅವಳನ್ನ ತನ್ನ ಆಪ್ತ ವಲಯದಲ್ಲಿ ಕೆಂಬೂತ ಎಂದು ಗೇಲಿ ಮಾಡಿದ್ದಿತ್ತು. ಅತ್ಯಂತ ಸಾಧಾರಣ ಓದು... ರೂಪ... ಕಮ್ಮಿ ಸಂಬಳಕ್ಕೆ ಒಪ್ಪಿಕೊಂಡು 'ಕನ್ನಡನುಡಿ' ಪತ್ರಿಕೆಯಲ್ಲಿ ಕೆಲಸ ಗಿಟ್ಟಿಸಿಕೊಂಡು ಝಂಡಾ ಊರಿ ಪತ್ರಕರ್ತೆ, ಕವಿ ಅಂತೆಲ್ಲ ಪ್ರಚಾರ ಪಡಕೊಳ್ಳುತ್ತಾ ಸಂಬಳಕ್ಕಾಗಿ ಎಡತಾಕುತ್ತಾ ಹೆಣಗಾಡುತ್ತಿರುವವಳು. ಬಹುಶಃ ಅವಳ ಮಿತಿ ಗೊತ್ತಿರುವುದರಿಂದ ಕೀಳರಿಮೆಯಿಂದ ದೂರವಿರುತ್ತಾಳೆ ಎಂದು ತನಗೆ ತಾನೇ ಸಮಾಧಾನ ಪಟ್ಟುಕೊಂಡರೂ ಅದನ್ನು ಸ್ವತಃ ಅವನೇ ನಂಬುತ್ತಿರಲಿಲ್ಲ. ಅವಳ ಬರಹಗಳಲ್ಲಿ ಅವನಂತೆ ಅಥವಾ ಅವನು ನಿರೀಕ್ಷಿಸುವಂತ ಪ್ರಖರತೆಯಿಲ್ಲ. ಆದರೆ, ಅವಳ ಕೆಲವು ಕವಿತೆಗಳು, ಲೇಖನಗಳು ಸತ್ಯವನ್ನು ಮೆಲ್ಲ ಮೆಲ್ಲ ಬಗೆದು ಬೇರು ಸಮೇತ ಎಳೆಸಿ ಕಣ್ಣ ಮುಂದೆ ಕುಕ್ಕುವ ರೀತಿ ಬೇರೆಯವರನ್ನು ಬಿಡಿ ಲೋಹಿತೇಶ್ವರನನ್ನೇ ನಡುಗಿಸುತ್ತಿತ್ತು.

